**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ವಿಜಯಪುರ ಇವರ ನ್ಯಾಯಾಲಯ**

<u>ಎಸ್.ಸಿ.ನಂ.168/2022</u>

<u>ಪಿಡಬ್ಲ್ಯೂ-05(ಸಿಡಬ್ಲ್ಯೂ-07)</u>

ಸಾಕ್ಷಿದಾರರ ಹೆಸರು : ಗೈಬಿಸಾಬ ಜಾಲಮಟ್ಟಿ

ತಂದೆಯ ಹೆಸರು : ಬಾಲಪ್ಪ

ವಯಸ್ಸು : 35 ವರ್ಷ

ಉದ್ಯೋಗ : ಕೂಲಿಕೆಲಸ

ವಾಸಸ್ಥಳ : ಅಥಾಲಟ್ಟಿ

<u>**ಸಾಕ್ಷಿಗೆ ಇಂದು ದಿನಾಂಕ** :- 23/09/2025 **ರಂದು ಪ್ರಮಾಣೀಕರಿಸಲಾಯಿತು.**</u>

<u>**ಮುಖ್ಯ ವಿಚಾರಣೆ** :- **ಸರಕಾರಿ ಅಭಿಯೋಜಕರವರಿಂದ.**</u>

ಆರೋಪಿ ನನ್ನ ತಮ್ಮ. ಮೃತ ಲಕ್ಷ್ಮೀಬಾಯಿ ಆತನ ಹೆಂಡತಿ. ಚಾಸಾ-1 ಮತ್ತು 8 ರವರು ಆಕೆಯ ತಂದೆ-ತಾಯಿ. ಲಕ್ಷ್ಮೀಬಾಯಿ ಅಂದಾಜು ಮೂರು ವರ್ಷಗಳ ಹಿಂದೆ ಅಥಾಲಟ್ಟಿಯ ಅವರ ತೋಟದ ಮನೆಯಲ್ಲಿ ತೀರಿಕೊಂಡಿರುತ್ತಾಳೆ. ಸದರಿ ಮನೆಯಲ್ಲಿ ಆರೋಪಿ ಮತ್ತು ಲಕ್ಷ್ಮೀಬಾಯಿ ಮಾತ್ರ ವಾಸವಿದ್ದರು. ನಾನು ಆ ಮನೆಯ ಸಮೀಪ ಇರುವ ಹೊಲದಲ್ಲಿ ಪ್ರತ್ಯೇಕ ಮನೆ ಮಾಡಿಕೊಂಡು ವಾಸವಿದ್ದೇನೆ. ಆಕೆ ಹೇಗೆ ತೀರಿಕೊಂಡಳು ಎಂದು ನನಗೆ ಗೊತ್ತಿಲ್ಲ. ಆ ದಿನ ನಾನು ಅಥಣಿಗೆ ಹೋಗಿದ್ದೆ. ನಾನು ಆಕೆ ಹೇಗೆ ತೀರಿಕೊಂಡಳು ಎಂದು ವಿಚಾರ ಮಾಡಿರುವುದಿಲ್ಲ. ಆರೋಪಿ ಮತ್ತು ಮೃತ ಲಕ್ಷ್ಮೀಬಾಯಿ ಚೆನ್ನಾಗಿ ಸಂಸಾರ ಮಾಡುತ್ತಿದ್ದರು. ನಾನು ಚಾಸಾ-1 & 8 ರವರಿಗೆ ಆಕೆ ಹೇಗೆ ತೀರಿಕೊಂಡಿರುತ್ತಾಳೆ ಎಂದು ನಾನು ಹೇಳಿರುವುದಿಲ್ಲ. ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

*(ಸರಕಾರಿ ಅಭಿಯೋಜಕರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು.)*

**ಪಾಟೀ ಸವಾಲುಃ-ಸರಕಾರಿ ಅಭಿಯೋಜಕರವರಿಂದ**

ಆರೋಪಿ ಮತ್ತು ಮೃತ ಲಕ್ಷ್ಮೀಬಾಯಿ ಸಣ್ಣ ಪುಟ್ಟ ವಿಷಯಕ್ಕೆ ಸಂಬಂಧಿಸಿದಂತೆ ಜಗಳ ಮಾಡುತ್ತಾ ಬಂದಿದ್ದರು ಎಂದರೆ ಸರಿಯಲ್ಲ. ಜಗಳದಲ್ಲಿ ಆರೋಪಿಯು ತನ್ನ ಹೆಂಡತಿಗೆ ಹೊಡೆಬಡೆ ಮಾಡುತ್ತಿದ್ದ ಎಂದರೆ ಸರಿಯಲ್ಲ. ಇದರಿಂದ ಆಕೆಯ ತವರು ಮನೆಯವರು ಮತ್ತು ನನ್ನ ತಂದೆ ಹಾಗೂ ನಾನು ಕೂಡಿ ನ್ಯಾಯ ಪಂಚಾಯಿತಿ ಮಾಡಿದ್ದರೂ ಕೂಡಾ ಆರೋಪಿಯು ಆತನ ಹೆಂಡತಿಯೊಂದಿಗ ಜಗಳ ಮಾಡಿ ಹೊಡೆಬಡೆ ಮಾಡುವುದು ಬಿಟ್ಟಿರಲಿಲ್ಲ ಎಂದರೆ ಸರಿಯಲ್ಲ.

ದಿ: 15.02.2022 ರಂದು ಮುಂಜಾನೆ 6.30 ಗಂಟೆ ಸುಮಾರಿಗೆ, ನಾನು ಮನೆಯಲ್ಲಿದ್ದಾಗ, ಆರೋಪಿಯ ಮನೆಯಲ್ಲಿ ಗಂಡ ಹೆಂಡತಿ ಇಬ್ಬರು ಜಗಳ ಮಾಡುವ ಶಬ್ದ ಕೇಳೀ ನಾನು ಓಡಿ ಹೋಗುವಷ್ಟರಲ್ಲಿ ಆರೋಪಿಯು ಮನೆಯಿಂದ ಹೊರಗಡೆ ಬಂದ ಎಂದರೆ ಸರಿಯಲ್ಲ. ಮೃತ ಲಕ್ಷ್ಮೀಬಾಯಿ ಮನೆ ಒಳಗಡೆ ಮಂಚದ ಮೇಲೆ ಸ್ವಲ್ಪ ಭಾಗ ಮತ್ತು ನೆಲದ ಮೆಲೆ ಸ್ವಲ್ಪ ಭಾಗ ಅಸ್ತವ್ಯಸ್ತವಾಗಿ ಬಿದ್ದಿದ್ದಳು ಎಂದರೆ ಸರಿಯಲ್ಲ. ಆರೋಪಿಗೆ ಯಾಕೆ , ಏನಾಯಿತು ಎಂದು ಕೇಳಿದಾಗ ಆತನು ನಾನು ಎರಡು ದಿನಗಳೀಂದ ಮನೆಯಲ್ಲಿ ಊಟ ಮಾಡಿರಲಿಲ್ಲ, ಇಂದು ಬೆಳಿಗ್ಗೆ ಬೇಗನೇ ಕೂಲಿಕೆಲಸಕ್ಕೆ ಹೋಗುವ ಸಲುವಾಗಿ ಅಡುಗೆ ಮಾಡಲು ಹೆಂಡತಿಗೆ ಎಬ್ಬಿಸಲು ಅವಳು ಎರಡು ದಿನ ಮನೆಯಲ್ಲಿ ಊಟ ಮಾಡಿಲ್ಲ, ನಿನಗೆ ನಿನ್ನ ತಾಯಿ ತಿರುಗಾಡುವ ಹಾಗೆ ಹರಗ್ಯಾಡಿ ತಿನ್ನುವ ಚಟ ಬಿದ್ದದ, ನಾಯಾಕೆ ಅಡುಗೆ ಮಾಡ್ಲಿ, ಎಲ್ಲಿ ಯಾದರೂ ತಿನ್ನು ಹೋಗು ಎಂದು

ಒದರಾಡಲಿಕ್ಕೆ ಹತ್ತಿದ್ದಳು ಎಂದು ತಿಳಿಸಿದ ಎಂದರೆ ಸರಿಯಲ್ಲ. ಇದೇ ತರಹ ಹಲವಾರು ಬಾರಿ ಜಗಳ ಮಾಡಿ, ಒದರಾಡುತ್ತಾ ಬಂದಿದ್ದು, ಊರಲ್ಲಿ ನನ್ನ ಮಾನ ಮರ್ಯದೆ ತೆಗೆದಿದ್ದು, ಇವಳಿಗೆ ಹೀಗೆ ಬಿಟ್ಟರೇ, ನನಗೆ ಕಿರಿಕಿರಿ ತಪ್ಪಿದಲ್ಲ ಎಂದು ಅವಳನ್ನು ಕೊಲೆ ಮಾಡುವ ಉದ್ದೇಶದಿಂದ ಕೈಯಿಂದ ಕುತ್ತಿಗೆ ಹಿಚುಕಿ, ಕೊಲೆ ಮಾಡಿರುತ್ತೇನೆ ಎಂದು ಹೇಳಿದ ಎಂದರೆ ಸರಿಯಲ್ಲ. ನಾನು ಮನೆಯ ಒಳಗಡೆ ಹೋಗಿ ನೋಡಿದಾಗ ಲಕ್ಷ್ಮೀಬಾಯಿ ತೀರಿಕೊಂಡಿದ್ದಳು ಎಂದರೆ ಸರಿಯಲ್ಲ. ಆರೋಪಿಯು ಲಕ್ಷ್ಮೀಬಾಯಿಯ ಸಂಬಂಧಿಕರಿಗೆ ಫೋನ ಮಾಡಿ, ಆಕೆ ತೀರಿಕೊಂಡ ವಿಷಯ ಹೇಳಿದ ಎಂದರೆ ನನಗೆ ಗೊತ್ತಿಲ್ಲ. ನಂತರ ಲಕ್ಷ್ಮೀಬಾಯಿಯ ಸಂಬಂಧಿಕರು ಗ್ರಾಮೀಣ ಠಾಣೆಯಲ್ಲಿ ದೂರು ದಾಖಲಿಸಿದರು ಎಂದರೆ ಸರಿಯಲ್ಲ.

ದಿ: 17.02.2022 ರಂದು ನಾನು ಚಾಸಾ-1 & 8 ರವರಿಗೆ ಅವರು ಕೇಳಿದಾಗ ಈ ವಿಚಾರವನ್ನು ತಿಳಿಸಿದೆ ಎಂದರೆ ಸರಿಯಲ್ಲ. ಈ ರೀತಿ ನಾನು ಪೋಲಿಸರ ಮುಂದೆ ದಿ: 17.02.2022 ರಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಹೇಳೀಕೆಯನ್ನು ನಿ.ಪಿ.8 ಎಂದು ಗುರುತಿಸಲಾಯಿತು. ಆರೋಪಿ ನನ್ನ ತಮ್ಮನಾಗಿರುವ ಕಾರಣ ಅವನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು:- ಶ್ರೀ. ಎಮ್.ಜಿ.ಕೆ., ವಕೀಲರಿಂದ ಆರೋಪಿ ಪರಃ**

ಇಲ್ಲ ಎಂದು ನುಡಿಯುತ್ತಾರೆ.

*(ನನ್ನ ಉಕ್ತ ಲೇಖನದ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).*

ಓ.ಹೇ.ಕೇ. ಸರಿ ಅದೆ,

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪುರ.

## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ವಿಜಯಪುರ ಇವರ ನ್ಯಾಯಾಲಯ

**ಎಸ್.ಸಿ.ನಂ.168/2022**

**ಪಿಡಬ್ಲ್ಯೂ- 06(ಸಿಡಬ್ಲ್ಯೂ-08)**

ಸಾಕ್ಷಿದಾರರ ಹೆಸರು : ಸರಸ್ವತಿ ಜಂಪ್ಲೆ
ಗಂಡನ ಹೆಸರು : ರಾಜಶೇಖರ
ವಯಸ್ಸು : 50 ವರ್ಷ
ಉದ್ಯೋಗ : ಮನೆಗೆಲಸ
ವಾಸಸ್ಥಳ : ಜೇವೂರ, ತಾ: ಅಕ್ಕಲಕೋಟ, ಜಿಲ್ಲಾ: ಸೋಲಾಪೂರ

**ಸಾಕ್ಷಿಗೆ ಇಂದು ದಿನಾಂಕ :- 23/05/2025 ರಂದು ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ :- ಸರಕಾರಿ ಅಭಿಯೋಜಕರವರಿಂದ.**

ಚಾಸಾ-1 ನನ್ನ ಗಂಡ. ಮೃತ ಲಕ್ಷ್ಮೀಬಾಯಿ ನನ್ನ ಮಗಳು. ಆರೋಪಿ ಆಕೆಯ ಗಂಡ. ಚಾಸಾ-7 ಆರೋಪಿಯ ಅಣ್ಣ. ಚಾಸಾ-9 ರಿಂದ 15 ರವರು ನನಗೆ ಗೊತ್ತು. ಲಕ್ಷ್ಮೀಬಾಯಿಯನ್ನು ಆರೋಪಿ ಹೊಡೆದು ಕೊಂದಿರುತ್ತಾನೆ. ಮೃತ ಲಕ್ಷ್ಮೀಬಾಯಿಯನ್ನು ಆಕೆ ತೀರಿಕೊಳ್ಳುವ 4 ವರ್ಷದ ಹಿಂದೆ ಆರೋಪಿಯೊಂದಿಗೆ ಮದುವೆ ಮಾಡಿಕೊಟ್ಟಿರುತ್ತೇವೆ. ಮದುವೆ ಆದ ನಂತರ ಆಕೆ ಆರೋಪಿಯ ಜೊತೆ ಇಬ್ಬರೇ ಅವರ ಹೊಲದ ಮನೆಯಲ್ಲಿ ವಾಸವಿದ್ದರು. ಚಾಸಾ-7 ರವರ ಮನೆ ಆರೋಪಿಯ ಮನೆಯ ಪಕ್ಕದಲ್ಲಿ ಇತ್ತು. ಆರೋಪಿ ಮತ್ತು ಮೃತಳು ಕಚ್ಚಾಡುತ್ತಿದ್ದರು, ಆ ಬಗ್ಗೆ ನಾವು ಅವರ ಮನೆಗೆ ಹೋಗಿ, ಬುದ್ದಿ ಹೇಳಿ ಬಂದಿದ್ದೇವು.

ಸುಮಾರು 3 ವರ್ಷಗಳ ಹಿಂದೆ ಆರೋಪಿ ಬೆಳಿಗ್ಗೆ 6.30 ಗಂಟೆಗೆ ಕರೆ ಮಾಡಿ, ಲಕ್ಷ್ಮೀಬಾಯಿಗೆ ಹೃದಯಾಘಾತ ಆಗಿದೆ ಎಂದು ತಿಳಿಸಿದ. ನಾವು ಎಲ್ಲರೂ ಸೇರಿಕೊಂಡು ಆರೋಪಿಯ ಮನೆಗೆ ಹೋದೆವು. ಆಕೆ ಮನೆಯ ಒಳಗಡೆ ಬಿದ್ದಿದ್ದಳು. ಆಕೆಯ ಕುತ್ತಿಗೆಯಲ್ಲಿ ಕಂದು ಗಟ್ಟಿದ ಮತ್ತು ಪರಚಿದ ಗಾಯದ ಗುರುತುಗಳು ಇದ್ದವು. ನಾವು

ಅದೇ ದಿನ ನಮ್ಮ ಮಗಳ ಸಾವಿನಲ್ಲಿ ಸಂಶಯ ಇದೆ ಎಂದು ದೂರು ನೀಡಿದೇವು. ಚಾಸಾ-7 ರವರು ಎರಡು ದಿನಗಳ ನಂತರ ನಮಗೆ ಆರೋಪಿಯ ಆ ದಿನ ಗಲಾಟೆ ಮಾಡಿ, ಆಕೆಯನ್ನು ಹೊಡೆದಿರುತ್ತಾನೆ ಎಂದು ತಿಳಿಸಿದನು. ಆರೋಪಿಯು ಆಕೆಗೆ ಅಡುಗೆ ಮಾಡು ಎಂದು ಹೇಳಿದಾಗ ಆಕೆಯು ಮಾಡುವುದಿಲ್ಲ ಎಂದು ಹೇಳಿದಾಗ ಆಕೆಯನ್ನು ಹೊಡೆದಿರುತ್ತಾನೆ ಎಂದು ತಿಳಿಸಿದನು. ಆಕೆಯನ್ನು ಕುತ್ತಿಗೆ ಒತ್ತಿ ಕೊಲೆ ಮಾಡಿರುತ್ತಾನೆ ಎಂದು ಹೇಳಿದ. ಆಕೆಯ ಮೈಮೇಲೆ ಇದ್ದ ಬಟ್ಟೆಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಹಸಿರು ಬಣ್ಣದ ಒಂದು ಸೀರೆ, ಕೆಂಪು ಬಣ್ಣದ ರವಿಕೆ, ಕೆಂಪು ಬಣ್ಣದ ಲಂಗ, ಚಾಕಲೇಟ ಬಣ್ಣದ ಒಳಉಡುಪುಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಮು.ಮಾ.1 ರಿಂದ 4 ಎಂದು ಗುರುತಿಸಲಾಯಿತು.

**ಪಾಟೀ ಸವಾಲು:- ಶ್ರೀ. ಎಮ್.ಜಿ.ಕೆ., ವಕೀಲರಿಂದ ಆರೋಪಿ ಪರಃ**

ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಕಾಲಾವಕಾಶ ಕೋರಿದ್ದು, ಯಾವುದೇ ಸಕಾರಣ ಕಂಡು ಬರದ ಕಾರಣ ಕೋರಿಕೆಯನ್ನು ತಿರಸ್ಕರಿಸಿ, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆ:- ಇಲ್ಲಾ.**

*(ನನ್ನ ಉಕ್ತ ಲೇಖನದ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).*

ಓ.ಹೇ.ಕೇ. ಸರಿ ಅದೆ,

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪುರ.

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ವಿಜಯಪುರ ಇವರ ನ್ಯಾಯಾಲಯ**

**ಎಸ್.ಸಿ.ನಂ.168/2022**

**ಪಿಡಬ್ಲ್ಯೂ-07 (ಸಿಡಬ್ಲ್ಯೂ- 09)**

ಸಾಕ್ಷಿದಾರರ ಹೆಸರು : ಗುಡದಪ್ಪ ಜಾಲಮಟ್ಟಿ

ತಂದೆಯ ಹೆಸರು : ಶಿವಪ್ಪ

ವಯಸ್ಸು : 53 ವರ್ಷ

ಉದ್ಯೋಗ : ಒಕ್ಕಲುತನ

ವಾಸಸ್ಥಳ : ಅಥಾಲಟ್ಟಿ, ವಿಜಯಪುರ

**ಸಾಕ್ಷಿಗೆ ಇಂದು ದಿನಾಂಕ :- 23/09/2025 ರಂದು ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ :- ಸರಕಾರಿ ಅಭಿಯೋಜಕರವರಿಂದ.**

ಆರೋಪಿ ನನ್ನ ಅಣ್ಣನ ಮಗ. ಮೃತ ಲಕ್ಷ್ಮೀಬಾಯಿ ಆತನ ಹೆಂಡತಿ. ಆರೋಪಿ ಮತ್ತು ಮೃತ ಲಕ್ಷ್ಮೀಬಾಯಿ ಇಬ್ಬರೇ ತೋಟದ ಮನೆಯಲ್ಲಿ ವಾಸವಿದ್ದರು. ಅವರಿಬ್ಬರ ಸಂಸಾರ ಚೆನ್ನಾಗಿ ಇತ್ತು. ಲಕ್ಷ್ಮೀಬಾಯಿ ಸುಮಾರು 3 ವರ್ಷಗಳ ಹಿಂದೆ ಆರೋಪಿಯ ಮನೆಯಲ್ಲಿ ಮೃತ ಪಟ್ಟಿರುತ್ತಾಳೆ. ಆಕೆ ಹೇಗೆ ತಿರಿಕೊಂಡಿರುತ್ತಾಳೆ ಎಂದು ನನಗೆ ಗೊತ್ತಿಲ್ಲ. ಆರೋಪಿಯು ಆಕೆ ತೀರಿಕೊಂಡಬಗ್ಗೆ ನನಗೆ ಫೋನ ಮಾಡಿ ತಿಳಿಸಿರುವುದಿಲ್ಲ. ಚಾಸಾ-1 ಮತ್ತು ಚಾಸಾ-8 ರವರು ಮೃತ ಲಕ್ಷ್ಮೀಬಾಯಿಯ ತಂದೆ ತಾಯಿ. ಚಾಸಾ-7 ಆರೋಪಿಯ ಮನೆಯ ಪಕ್ಕದಲ್ಲಿ ವಾಸವಿದ್ದ. ಚಾಸಾ-7 ರವರು ಈ ಘಟನೆ ಬಗ್ಗೆ ನನಗೆ ಯಾವುದೇ ಮಾಹಿತಿ ನೀಡಿರುವುದಿಲ್ಲ. ನಾನು ಲಕ್ಷ್ಮೀಬಾಯಿ ಹೇಗೆ ತೀರಿಕೊಂಡ ಬಗ್ಗೆ ವಿಚಾರ ಮಾಡಿರುವುದಿಲ್ಲ. ನಾನು ಪೋಲಿಸರ ಮುಂದೆ ನಾನು ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಬೇರೆ ಯಾವುದೇ ಮಾಹಿತಿ ಇಲ್ಲ.

*(ಸರಕಾರಿ ಅಭಿಯೋಜಕರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು.)*

**ಪಾಟೀ ಸವಾಲುಃ-ಸರಕಾರಿ ಅಭಿಯೋಜಕರವರಿಂದ**

ಆರೋಪಿ ರವಿ ಆತನ ಹೆಂಡತಿ ಲಕ್ಷ್ಮೀಬಾಯಿಯ ಜೊತೆ ಜಗಳ ಮಾಡುತ್ತಿದ್ದ ಮತ್ತು ಅವಳಿಗೆ ಹೊಡೆಬಡೆ ಮಾಡುತ್ತಿದ್ದ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಮತ್ತು ನಮ್ಮ ಅಣ್ಣ ಬಾಲಪ್ಪ ಹಾಗೂ ಲಕ್ಷ್ಮೀಬಾಯಿಯ ತಂದೆ ತಾಯಿ ಎಲ್ಲರೂ ಕೂಡಿ ಬುದ್ದಿವಾದ ಹೇಳಿದ್ದರೂ ಸಹ ಆರೋಪಿಯು ಆತನ ಹೆಂಡತಿಯ ಜೊತೆ ಜಗಳ ಮಾಡುವುದನ್ನು ಬಿಟ್ಟಿರಲಿಲ್ಲ ಎಂದರೆ ಸರಿಯಲ್ಲ.

ದಿ: 15.02.2022 ರಂದು ನಸುಕಿನ ವೇಳೆಯಲ್ಲಿ ನಾನು ಊರಲ್ಲಿ ಕೆಲಸ ಇದ್ದುದ್ದರಿಂದ ಅಥಾಲಟ್ಟಿಗೆ ಬಂದಿದ್ದೆ ಎಂದರೆ ಸರಿಯಲ್ಲ. ಆರೋಪಿಯು ನನಗೆ ಫೋನ ಮಾಡಿ, ತನ್ನ ಹೆಂಡತಿ ಲಕ್ಷ್ಮೀಬಾಯಿ ಇವಳು ಹೃದಯಾಘಾತವಾಗಿ ತೀರಿಕೊಂಡಿರುತ್ತಾಳೆ ಎಂದು ಹೇಳೀದ ಎಂದರೆ ಸರಿಯಲ್ಲ. ನಾನು ಗಾಬರಿಯಾಗಿ ಬಂದು ನೋಡಿದಾಗ, ಲಕ್ಷ್ಮೀಬಾಯಿ ತೀರಿಕೊಂಡಿದ್ದಳು ಎಂದರೆ ಸರಿಯಲ್ಲ. ನಾನು ಆರೋಪಿಯನ್ನು ವಿಚಾರಿಸಿದಾಗ ಆಕೆ ಹೃದಯಾಘಾತ ಆಗಿ ತೀರಿಕೊಂಡಿರುತ್ತಾಳ ಎಂದು ತಿಳಿಸಿದ ಎಂದರೆ ಸರಿಯಲ್ಲ. ಮಧ್ಯಾಹ್ನ ಸುಮಾರಿಗೆ ಮೃತ ಲಕ್ಷ್ಮೀಬಾಯಿಯ ಮನೆಯವರು ಬಂದಿ್ದಸು, ಅವರಿಗೂ ಕೂಡ ಆರೋಪಿ ತನ್ನ ಹೆಂಡತಿ ಹೃದಯಾಘಾತವಾಗಿ ತೀರಿಕೊಂಡಿರುತ್ತಾಳೆ ಎಂದು ಹೇಳಿದ, ಆದರೆ ಅವರು ಅವಳ ಮರಣದಲ್ಲಿ ಸಂಶಯ ಇರುತ್ತದೆ ಎಂದು ವಿಜಯಪುರ ಗ್ರಾಮೀನ ಪೋಲಿಸ್ ಠಾಣೆಯಲ್ಲಿ ದೂರು ನೀಡಿದರು ಎಂದರೆ ನನಗೆ ಗೊತ್ತಿಲ್ಲ. ಈ ಘಟನೆ ಕಾಲಕ್ಕೆ ಚಾಸಾ-7 ರವರು ತಮ್ಮ ಮಕ್ಕಳಿಗೆ ಆರಾಮ ಇಲ್ಲದ್ದಕ್ಕೆ ವಿಜಯಪುರ ಆಸ್ಪತ್ರೆಗೆ ಹೋಗಿದ್ದನು ಎಂದರೆ ಸರಿಯಲ್ಲ.

ದಿ: 17.02.2022 ರಂದು ಚಾಸಾ-1 & 8 ರವರು ಬಂದು ತನ್ನ ಮಗಳು ಹೇಗೆ ತೀರಿಕೊಂಡಳು ಎಂದು ಚಾಸಾ-7 ರವರಿಗೆ ವಿಚಾರಿಸಿದಾಗ ಆತ ದಿ: 15.02.2022 ರಂದು ಮುಂಜಾನೆ 6.30 ಗಂಟೆ ಸುಮಾರಿಗೆ ಆರೋಪಿ ಮನೆಯಲ್ಲಿ ಆತ ಮತ್ತು ಮೃತಳ ಜಗಳವಾಗುವ ಶಬ್ದ ಕೇಳಿ ಚಾಸಾ-7 ರವರು ಹೋಗಿ ನೋಡುವಷ್ಟರಲ್ಲಿ ಆರೋಪಿಯು ಮನೆಯಿಂದ ಹೊರಗಡೆ ಬಂದ ಎಂದು ತಿಳಿಸಿದ ಎಂದರೆ ಸರಿಯಲ್ಲ. ಮೃತ ಲಕ್ಷ್ಮೀಬಾಯಿ ಮನೆ ಒಳಗಡೆ ಮಂಚದ ಮೇಲೆ ಸ್ವಲ್ಪ ಭಾಗ ಮತ್ತು ನೆಲದ ಮೆಲೆ ಸ್ವಲ್ಪ ಭಾಗ ಅಸ್ತವ್ಯಸ್ತವಾಗಿ ಬಿದ್ದಿದ್ದಳು ಮತ್ತು ಆರೋಪಿಗೆ ಯಾಕೆ , ಏನಾಯಿತು ಎಂದು ಕೇಳಿದಾಗ ಆತನು ನಾನು ಎರಡು ದಿನಗಳಿಂದ ಮನೆಯಲ್ಲಿ ಊಟ ಮಾಡಿರಲಿಲ್ಲ, ಅಂದು ಬೆಳಿಗ್ಗೆ ಬೇಗನೇ ಕೂಲಿಕೆಲಸಕ್ಕೆ ಹೋಗುವ ಸಲುವಾಗಿ ಅಡುಗೆ ಮಾಡಲು ಹೆಂಡತಿಗೆ ಎಬ್ಬಿಸಲು ಅವಳು ಎರಡು ದಿನ ಮನೆಯಲ್ಲಿ ಊಟ ಮಾಡಿಲ್ಲ, ನಿನಗೆ ನಿನ್ನ ತಾಯಿ ತಿರುಗಾಡುವ ಹಾಗೆ ಹರಗ್ಯಾಡಿ ತಿನ್ನುವ ಚಟ ಬಿದ್ದದ, ನಾಯಾಕೆ ಅಡುಗೆ ಮಾಡ್ಲಿ, ಎಲ್ಲಿ ಯಾದರೂ ತಿನ್ನು ಹೋಗು ಎಂದು ಒದರಾಡಲಿಕ್ಕೆ ಹತ್ತಿದ್ದಳು ಎಂದು ತಿಳಿಸಿದ ಮತ್ತು ಅದೇ ತರಹ ಹಲವಾರು ಬಾರಿ ಜಗಳ ಮಾಡಿ, ಒದರಾಡುತ್ತಾ ಬಂದಿದ್ದು, ಊರಲ್ಲಿ ನನ್ನ ಮಾನ ಮರ್ಯದೆ ತೆಗೆದಿದ್ದು, ಇವಳಿಗೆ ಹೀಗೆ ಬಿಟ್ಟರೇ, ನನಗೆ ಕಿರಿಕಿರಿ ತಪ್ಪಿದಲ್ಲ ಎಂದು ಅವಳನ್ನು ಕೊಲೆ ಮಾಡುವ ಉದ್ದೇಶದಿಂದ ಕೈಯಿಂದ ಕುತ್ತಿಗೆ ಹಿಚುಕಿ, ಕೊಲೆ ಮಾಡಿರುತ್ತೇನೆ ಎಂದು ಹೇಳಿದ ಎಂದು ಚಾಸಾ-7 ರವರು ನನಗೆ ತಿಳಿಸಿದ ಎಂದರೆ ಸರಿಯಲ್ಲ.

ಈ ರೀತಿ ನಾನು ಪೋಲಿಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಹೇಳಿಕೆಯ ಈ ಭಾಗವನ್ನು ನಿ.ಪಿ.9 ಎಂದು ಗುರುತಿಸಲಾಯಿತು. ಆರೋಪಿ ನನ್ನ ಅಣ್ಣನ ಮಗ ಆಗಿರುವ ಕಾರಣ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ

**ಪಾಟೀ ಸವಾಲು:- ಶ್ರೀ. ಎಮ್.ಜಿ.ಕೆ., ವಕೀಲರಿಂದ ಆರೋಪಿ ಪರಃ**

ಇಲ್ಲ ಎಂದು ನುಡಿಯುತ್ತಾರೆ.

*(ನನ್ನ ಉಕ್ತ ಲೇಖನದ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).*

ಓ.ಹೇ.ಕೇ. ಸರಿ ಅದೆ,

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪುರ.

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ವಿಜಯಪುರ ಇವರ ನ್ಯಾಯಾಲಯ**

**ಎಸ್.ಸಿ.ನಂ.168/2022**

**ಪಿಡಬ್ಲ್ಯೂ-08 (ಸಿಡಬ್ಲ್ಯೂ-10)**

ಸಾಕ್ಷಿದಾರರ ಹೆಸರು : ಬಾಳಪ್ಪ ಜಾಲಮಟ್ಟಿ

ತಂದೆಯ ಹೆಸರು : ಶಿವಪ್ಪ

ವಯಸ್ಸು : 60 ವರ್ಷ

ಉದ್ಯೋಗ : ಒಕ್ಕಲುತನ

ವಾಸಸ್ಥಳ : ಅಥಾಲಟ್ಟಿ, ವಿಜಯಪುರ

**ಸಾಕ್ಷಿಗೆ ಇಂದು ದಿನಾಂಕ :- 23/09/2025 ರಂದು ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ :- ಸರಕಾರಿ ಅಭಿಯೋಜಕರವರಿಂದ.**

ಆರೋಪಿ ನನ್ನ ಮಗ. ಮೃತ ಲಕ್ಷ್ಮೀಬಾಯಿ ಆತನ ಹೆಂಡತಿ. ಆರೋಪಿ ಮತ್ತು ಮೃತ ಲಕ್ಷ್ಮೀಬಾಯಿ ಇಬ್ಬರೇ ಹೊಲದ ಮನೆಯಲ್ಲಿ ವಾಸವಿದ್ದರು. ಚಾಸಾ-7 ನನ್ನ ಮಗ. ಆತನು ಅವರ ಮನೆಯ ಪಕ್ಕದಲ್ಲಿ ವಾಸವಿದ್ದ. ಲಕ್ಷ್ಮೀಬಾಯಿ ಸುಮಾರು 3 ವರ್ಷಗಳ ಹಿಂದೆ ಆರೋಪಿಯ ಮನೆಯಲ್ಲಿ ಮೃತ ಪಟ್ಟಿರುತ್ತಾಳೆ. ಆಕೆ ಹೇಗೆ ತೀರಿಕೊಂಡಿರುತ್ತಾಳೆ ಎಂದು ನನಗೆ ಗೊತ್ತಿಲ್ಲ. ಆರೋಪಿಯು ಆಕೆ ತೀರಿಕೊಂಡ ಬಗ್ಗೆ ನನಗೆ ಫೋನ ಮಾಡಿ ತಿಳಿಸಿರುವುದಿಲ್ಲ. ಚಾಸಾ-1 ಮತ್ತು ಚಾಸಾ-8 ರವರು ಮೃತ ಲಕ್ಷ್ಮೀಬಾಯಿಯ ತಂದೆ ತಾಯಿ. ಚಾಸಾ-7 ರವರು ಈ ಘಟನೆ ಬಗ್ಗೆ ನನಗೆ ಯಾವುದೇ ಮಾಹಿತಿ ನೀಡಿರುವುದಿಲ್ಲ. ನಾನು ಲಕ್ಷ್ಮೀಬಾಯಿ ಹೇಗೆ ತೀರಿಕೊಂಡ ಬಗ್ಗೆ ವಿಚಾರ ಮಾಡಿರುವುದಿಲ್ಲ. ನಾನು ಪೋಲಿಸರ ಮುಂದೆ ನಾನು ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಬೇರೆ ಯಾವುದೇ ಮಾಹಿತಿ ಇಲ್ಲ.

*(ಸರಕಾರಿ ಅಭಿಯೋಜಕರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು.)*

**ಪಾಟೀ ಸವಾಲುಃ-ಸರಕಾರಿ ಅಭಿಯೋಜಕರವರಿಂದ**

ಆರೋಪಿ ರವಿ ಆತನ ಹೆಂಡತಿ ಲಕ್ಷ್ಮೀಬಾಯಿಯ ಜೊತೆ ಜಗಳ ಮಾಡುತ್ತಿದ್ದ ಮತ್ತು ಅವಳಿಗೆ ಹೊಡೆಬಡೆ ಮಾಡುತ್ತಿದ್ದ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಮತ್ತು ಚಾಸಾ-9 ಹಾಗೂ ಲಕ್ಷ್ಮೀಬಾಯಿಯ ತಂದೆ ತಾಯಿ ಎಲ್ಲರೂ ಕೂಡಿ ಬುದ್ದಿವಾದ ಹೇಳಿದ್ದರೂ ಸಹ ಆರೋಪಿಯು ಆತನ ಹೆಂಡತಿಯ ಜೊತೆ ಜಗಳ ಮಾಡುವುದನ್ನು ಬಿಟ್ಟಿರಲಿಲ್ಲ ಎಂದರೆ ಸರಿಯಲ್ಲ.

ದಿ: 15.02.2022 ರಂದು ನಾನು ನಮ್ಮ ಜಮೀನಿನಲ್ಲಿದ್ದಾಗ ಆರೋಪಿಯು ನನಗೆ ಫೋನ ಮಾಡಿ, ತನ್ನ ಹೆಂಡತಿ ಲಕ್ಷ್ಮೀಬಾಯಿ ಇವಳು ಹೃದಯಾಘಾತವಾಗಿ ತೀರಿಕೊಂಡಿರುತ್ತಾಳೆ ಎಂದು ಹೇಳಿದ ಎಂದರೆ ಸರಿಯಲ್ಲ. ನಾನು ಗಾಬರಿಯಾಗಿ ಬಂದು ನೋಡಿದಾಗ, ಲಕ್ಷ್ಮೀಬಾಯಿ ತೀರಿಕೊಂಡಿದ್ದಳು ಎಂದರೆ ಸರಿಯಲ್ಲ. ನಾನು ಆರೋಪಿಯನ್ನು ವಿಚಾರಿಸಿದಾಗ ಆಕೆ ಹೃದಯಾಘಾತ ಆಗಿ ತೀರಿಕೊಂಡಿರುತ್ತಾಳೆ ಎಂದು ತಿಳಿಸಿದ ಎಂದರೆ ಸರಿಯಲ್ಲ. ಮಧ್ಯಾಹ್ನ ಸುಮಾರಿಗೆ ಮೃತ ಲಕ್ಷ್ಮೀಬಾಯಿಯ ಮನೆಯವರು ಬಂದಿದ್ದು, ಅವರಿಗೂ ಕೂಡ ಆರೋಪಿ ತನ್ನ ಹೆಂಡತಿ ಹೃದಯಾಘಾತವಾಗಿ ತೀರಿಕೊಂಡಿರುತ್ತಾಳೆ ಎಂದು ಹೇಳಿದ, ಆದರೆ ಅವರು ಅವಳ ಮರಣದಲ್ಲಿ ಸಂಶಯ ಇರುತ್ತದೆ ಎಂದು ವಿಜಯಪುರ ಗ್ರಾಮೀನ ಪೋಲಿಸ್ ಠಾಣೆಯಲ್ಲಿ ದೂರು ನೀಡಿದರು ಎಂದರೆ ನನಗೆ ಗೊತ್ತಿಲ್ಲ. ಈ ಘಟನೆ ಕಾಲಕ್ಕೆ ಚಾಸಾ-7 ರವರು ತಮ್ಮ ಮಕ್ಕಳಿಗೆ ಆರಾಮ ಇಲ್ಲದ್ದಕ್ಕೆ ವಿಜಯಪುರ ಆಸ್ಪತ್ರೆಗೆ ಹೋಗಿದ್ದನು ಎಂದರೆ ಸರಿಯಲ್ಲ.

ದಿ: 17.02.2022 ರಂದು ಚಾಸಾ-1 & 8 ರವರು ಬಂದು ತನ್ನ ಮಗಳು ಹೇಗೆ ತೀರಿಕೊಂಡಳು ಎಂದು ಚಾಸಾ-7 ರವರಿಗೆ ವಿಚಾರಿಸಿದಾಗ ಆತ ದಿ: 15.02.2022 ರಂದು ಮುಂಜಾನೆ 6.30 ಗಂಟೆ ಸುಮಾರಿಗೆ ಆರೋಪಿ ಮನೆಯಲ್ಲಿ ಆತ ಮತ್ತು ಮೃತಳ ಜಗಳವಾಗುವ ಶಬ್ದ ಕೇಳಿ ಚಾಸಾ-7 ರವರು ಹೋಗಿ ನೋಡುವಷ್ಟರಲ್ಲಿ ಆರೋಪಿಯು ಮನೆಯಿಂದ ಹೊರಗಡೆ ಬಂದ ಎಂದು ತಿಳಿಸಿದ ಎಂದರೆ ಸರಿಯಲ್ಲ. ಮೃತ ಲಕ್ಷ್ಮೀಬಾಯಿ ಮನೆ ಒಳಗಡೆ ಮಂಚದ ಮೇಲೆ ಸ್ವಲ್ಪ ಭಾಗ ಮತ್ತು ನೆಲದ ಮೆಲೆ ಸ್ವಲ್ಪ ಭಾಗ ಅಸ್ತವ್ಯಸ್ತವಾಗಿ ಬಿದ್ದಿದ್ದಳು ಮತ್ತು ಆರೋಪಿಗೆ ಯಾಕೆ , ಏನಾಯಿತು ಎಂದು ಕೇಳಿದಾಗ ಆತನು ನಾನು ಎರಡು ದಿನಗಳಿಂದ ಮನೆಯಲ್ಲಿ ಊಟ ಮಾಡಿರಲಿಲ್ಲ, ಅಂದು ಬೆಳಿಗ್ಗೆ ಬೇಗನೇ ಕೂಲಿಕೆಲಸಕ್ಕೆ ಹೋಗುವ ಸಲುವಾಗಿ ಅಡುಗೆ ಮಾಡಲು ಹೆಂಡತಿಗೆ ಎಬ್ಬಿಸಲು ಅವಳು ಎರಡು ದಿನ ಮನೆಯಲ್ಲಿ ಊಟ ಮಾಡಿಲ್ಲ, ನಿನಗೆ ನಿನ್ನ ತಾಯಿ ತಿರುಗಾಡುವ ಹಾಗೆ ಹರಗ್ಯಾಡಿ ತಿನ್ನುವ ಚಟ ಬಿದ್ದದ, ನಾಯಾಕೆ ಅಡುಗೆ ಮಾಡ್ಲಿ, ಎಲ್ಲಿ ಯಾದರೂ ತಿನ್ನು ಹೋಗು ಎಂದು ಒದರಾಡಲಿಕ್ಕೆ ಹತ್ತಿದ್ದಳು ಎಂದು ತಿಳಿಸಿದ ಮತ್ತು ಅದೇ ತರಹ ಹಲವಾರು ಬಾರಿ ಜಗಳ ಮಾಡಿ, ಒದರಾಡುತ್ತಾ ಬಂದಿದ್ದು, ಊರಲ್ಲಿ ನನ್ನ ಮಾನ ಮರ್ಯದೆ ತೆಗೆದಿದ್ದು, ಇವಳಿಗೆ ಹೀಗೆ ಬಿಟ್ಟರೇ, ನನಗೆ ಕಿರಿಕಿರಿ ತಪ್ಪಿದಲ್ಲ ಎಂದು ಅವಳನ್ನು ಕೊಲೆ ಮಾಡುವ ಉದ್ದೇಶದಿಂದ ಕೈಯಿಂದ ಕುತ್ತಿಗೆ ಹಿಚುಕಿ, ಕೊಲೆ ಮಾಡಿರುತ್ತೇನೆ ಎಂದು ಹೇಳಿದ ಎಂದು ಚಾಸಾ-7 ರವರು ನನಗೆ ತಿಳಿಸಿದ ಎಂದರೆ ಸರಿಯಲ್ಲ.

ಈ ರೀತಿ ನಾನು ಪೋಲಿಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಹೇಳಿಕೆಯ ಈ ಭಾಗವನ್ನು ನಿ.ಪಿ.10 ಎಂದು ಗುರುತಿಸಲಾಯಿತು. ಆರೋಪಿ ನನ್ನ ಮಗ ಆಗಿರುವ ಕಾರಣ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ

**ಪಾಟೀ ಸವಾಲು:- ಶ್ರೀ. ಎಮ್.ಜಿ.ಕೆ., ವಕೀಲರಿಂದ ಆರೋಪಿ ಪರಃ**

ಇಲ್ಲ ಎಂದು ನುಡಿಯುತ್ತಾರೆ.

*(ನನ್ನ ಉಕ್ತ ಲೇಖನದ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).*

ಓ.ಹೇ.ಕೇ. ಸರಿ ಅದೆ,

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪುರ.

## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ವಿಜಯಪುರ ಇವರ ನ್ಯಾಯಾಲಯ

**ಎಸ್.ಸಿ.ನಂ.168/2022**

**ಪಿಡಬ್ಲ್ಯೂ- 09(ಸಿಡಬ್ಲ್ಯೂ-11)**

ಸಾಕ್ಷಿದಾರರ ಹೆಸರು : ಸದಾಶಿವ ಕೊಣ್ಣೂರ

ತಂದೆಯ ಹೆಸರು : ಯಲಗೊಂಡ

ವಯಸ್ಸು : **42** ವರ್ಷ

ಉದ್ಯೋಗ : ಒಕ್ಕಲುತನ

ವಾಸಸ್ಥಳ : ಲೋಗಾಂವಿ, ತಾ: ತಿಕೋಟಾ

**ಸಾಕ್ಷಿಗೆ ಇಂದು ದಿನಾಂಕ :- 23/09/2025 ರಂದು ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ :- ಸರಕಾರಿ ಅಭಿಯೋಜಕರವರಿಂದ.**

ಚಾಸಾ-8 ನನ್ನ ಅಕ್ಕ. ಮೃತ ಲಕ್ಷ್ಮೀಬಾಯಿ ನನ್ನ ಅಕ್ಕನ ಮಗಳು. ಆರೋಪಿ ಆಕೆಯ ಗಂಡ. ಚಾಸಾ-7 ಆರೋಪಿಯ ಅಣ್ಣ. ಚಾಸಾ-10 ಆರೋಪಿಯ ತಂದೆ.

ಮೃತ ಲಕ್ಷ್ಮೀಬಾಯಿಯ ಮದುವೆ ಆಕೆ ತೀರಿಕೊಳ್ಳುವ 4 ವರ್ಷಗಳ ಹಿಂದೆ ಆರೋಪಿಯ ಜೊತೆ ಆಗಿತ್ತು. ಮದುವೆ ಆದ ನಂತರ ಆಕೆ ಆರೋಪಿಯ ಜೊತೆ ಅವರ ಹೊಲದ ಮನೆಯಲ್ಲಿ ಅಥಾಲಟ್ಟಿಯಲ್ಲಿವಾಸವಿದ್ದರು. ಚಾಸಾ-7 ರವರ ಅವರ ಮನೆಯ ಪಕ್ಕದಲ್ಲಿ ವಾಸವಿದ್ದರು. ಮದುವೆ ಆದ ನಂತರ ಒಂದೆರಡು ಬಾರಿ ಆರೋಪಿ ಮತ್ತು ಮೃತಳ ಮಧ್ಯೆ ಜಗಳ ಆಗಿತ್ತು. ಆಗ ನಮ್ಮ ಊರಿನ ಹಿರಿಯರು ಮತ್ತು ನಾವು ಹೋಗಿ ಆರೋಪಿಗೆ ಬುದ್ದಿವಾದ ಹೇಳಿ ಬಂದಿದ್ದೇವು. ಅದಾದ ನಂತರ ಗಂಡ ಹೆಂಡತಿ ಚೆನ್ನಾಗಿದ್ದರು.

ದಿ: 15.02.2022 ರಂದು ಆರೋಪಿಯು ಕರೆ ಮಾಡಿ ಲಕ್ಷ್ಮೀಬಾಯಿ ಹೃದಯಾಘಾತವಾಗಿ ತೀರಿಕೊಂಡಿದ್ದಾಳೆ ಎಂದು ತಿಳಿಸಿದ. ನಾವು ಬೆಳಿಗ್ಗೆ 7.30-8.00 ಗಂಟೆಗೆ ಆರೋಪಿಯ ಮನಗೆ ಹೋದೆವು. ನಾವು ಅಲ್ಲಿ ಹೋಗಿ ನೋಡಿದಾಗ ಆಕೆಯ

ಮೃತ ದೇಹ ಮನೆಯ ಒಳಗಡೆ ಮಂಚದ ಮೇಲೆ ಇತ್ತು. ಆಕೆಯ ಕುತ್ತಿಗೆಯ ಎರಡು ಭಾಗದಲ್ಲಿ ಕಂದುಗಟ್ಟಿದ ಮತ್ತು ಪರಚಿದ ಗಾಯಗಳಾಗಿದ್ದವು. ಆರೋಪಿಯು ನಾನು ಹೊಡೆದಿಲ್ಲ ಎಂದು ತಿಳಿಸಿದ. ನಾವು ಸಂಶಯ ಬಂದು ದೂರು ನೀಡಿರುತ್ತೇವೆ. ದೂರನ್ನು ಚಾಸಾ-1 & 8 ರವರು ಹೇಳಿದ ಹಾಗೆ ನಾನೇ ಬರೆದಿರುತ್ತೇನೆ. ಸಾಕ್ಷಿಯು ದೂರಿನಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು. ಚಾಸಾ-7 ರವರನ್ನು ನಾವು ವಿಚಾರಿಸಿದಾಗ ಆತ ರಾತ್ರಿ ಗಲಾಟೆ ಆಗಿತ್ತು, ನಾನು ಹೋಗಿ ನೋಡುವಷ್ಟರಲ್ಲಿ ಲಕ್ಷ್ಮೀಬಾಯಿ ಮಂಚದ ಮೇಲೆ ಬಿದ್ದಿದ್ದಳು ಎಂದು ತಿಳಿಸಿದನು.

**ಪಾಟೀ ಸವಾಲು:- ಶ್ರೀ. ಎಮ್.ಜಿ.ಕೆ., ವಕೀಲರಿಂದ ಆರೋಪಿ ಪರಃ**

ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಕಾಲಾವಕಾಶ ಕೋರಿದ್ದು, ಯಾವುದೇ ಸಕಾರಣ ಕಂಡು ಬರದ ಕಾರಣ ಕೋರಿಕೆಯನ್ನು ತಿರಸ್ಕರಿಸಿ, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆ:- ಇಲ್ಲಾ.**

*(ನನ್ನ ಉಕ್ತ ಲೇಖನದ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).*

ಓ.ಹೇ.ಕೇ. ಸರಿ ಅದೆ,

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪುರ.

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ವಿಜಯಪುರ ಇವರ ನ್ಯಾಯಾಲಯ**

**ಎಸ್.ಸಿ.ನಂ.168/2022**

**ಪಿಡಬ್ಲ್ಯೂ-10 (ಸಿಡಬ್ಲ್ಯೂ-12)**

ಸಾಕ್ಷಿದಾರರ ಹೆಸರು : ಬಾಪು ಜಾಲಮಟ್ಟಿ
ತಂದೆಯ ಹೆಸರು : ಸತ್ಯಪ್ಪ
ವಯಸ್ಸು : 50 ವರ್ಷ
ಉದ್ಯೋಗ : ಒಕ್ಕಲುತನ
ವಾಸಸ್ಥಳ : ಅಥಾಲಟ್ಟಿ, ವಿಜಯಪುರ.

**ಸಾಕ್ಷಿಗೆ ಇಂದು ದಿನಾಂಕ :- 23/09/2025 ರಂದು ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ :- ಸರಕಾರಿ ಅಭಿಯೋಜಕರವರಿಂದ.**

ಆರೋಪಿಯು ನನ್ನ ಚಿಕ್ಕಪ್ಪನ ಮಗ. ಮೃತ ಲಕ್ಷ್ಮೀಬಾಯಿ ಆತನ ಹೆಂಡತಿ. ಇಬ್ಬರು ತೋಟದ ಮನೆಯಲ್ಲಿ ವಾಸವಿದ್ದರು. ಚಾಸಾ-7 ರವರು ಆರೋಪಿತನ ಮನೆಯ ಪಕ್ಕದಲ್ಲಿ ಪ್ರತ್ಯೇಕ ಮನೆಯಲ್ಲಿ ವಾಸವಿದ್ದರು. ಆಕೆ ತೀರಿಕೊಳ್ಳುವ ಮೂರು ವರ್ಷಗಳ ಹಿಂದೆ ಆರೋಪಿಯ ಜೊತೆ ಮದುವೆ ಆಗಿತ್ತು, ಆಕೆ ಹೇಗೆ ತೀರಿಕೊಂಡಳು ಎಂದು ನನಗೆ ಗೊತ್ತಿಲ್ಲ. ಆರೋಪಿ ಮತ್ತು ಆತನ ಹೆಂಡತಿ ಚೆನ್ನಾಗಿದ್ದರು. ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿಲ್ಲ. ಚಾಸಾ-7 ರವರು ಈ ಘಟನೆ ಬಗ್ಗೆ ನನಗೆ ಯಾವುದೇ ವಿಚಾರ ಹೇಳಿರುವುದಿಲ್ಲ. ಈಗ ತೋರಿಸಿದ ದಾಖಲೆಯಲ್ಲಿರುವ ಸಹಿ ನನ್ನದಾಗಿರುತ್ತದೆ. ದಾಖಲೆಯು ಸ್ಥಳ ಪಂಚನಾಮೆ ಆಗಿದ್ದು, ಅದನ್ನು ಈಗಾಗಲೇ ನಿ.ಪಿ.5 ಎಂದುಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.5(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಸದರಿ ಸಹಿಯನ್ನು ಆರೋಪಿಯ ಮನೆಯಲ್ಲಿ ಮಾಡಿರುತ್ತೇನೆ ಎಂದು ಹೇಳುತ್ತಾರೆ. ಸಾಕ್ಷಿಯು ನಿ.ಪಿ.6 ರಲ್ಲಿ ತನ್ನನ್ನು ನೋಡಿ ಗುರುತಿಸುತ್ತಾರೆ.

*(ಸರಕಾರಿ ಅಭಿಯೋಜಕರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು.)*

**ಪಾಟೀ ಸವಾಲುಃ-ಸರಕಾರಿ ಅಭಿಯೋಜಕರವರಿಂದ**

ದಿ: 15.02.2022 ರಂದು ಮುಂಜಾನೆ 6.30 ಗಂಟೆಗೆ ಆರೋಪಿಯು ತನ್ನ ಹೆಂಡತಿ ಲಕ್ಷ್ಮೀಬಾಯಿಯೊಂದಿ್ ಎ ಜಗಳ ಮಾಡಲು ಹತ್ತಿದಾಗ ಚಾಸಾ-7 ಆರೋಪಿಯ ಮನೆಗೆ ಹೋದಾಗ, ಆಕೆ ಮನೆಯ ಒಳಗಡೆ ಮಂಚದ ಮೇಲೆ ಅಸ್ತವ್ಯಸ್ತವಗಿ ಬಿದದ್ದಿಳು ಮತ್ತು ಈ ಬಗ್ಗೆ ಚಾಸಾ-7 ಆರೋಪಿಯನ್ನು ವಿಚಾರಿಸಿದಾಗ ಆತ ನಾನು ಎರಡು ದಿನಗಳೀಂದ ಮನೆಯಲ್ಲಿ ಊಟ ಮಾಡಿರುವುದಿಲ್ಲ, ಇಂದು ಬೆಳಿಗ್ಗೆ ಕೆಲಸಕ್ಕೆ ಹೋಗುವ ಸಲುವಾಗಿ ಅಡುಗೆ ಮಾಡಲು ಹೆಂಡತಿಗೆ ಎಬ್ಬಿಸಲು ಅವಳು ಎರಡು ದಿನ ಮನೆಯಲ್ಲಿ ಊಟ ಮಾಡಿಲ್ಲ, ನಿನಗೆ ನಿನ್ನ ತಾಯಿ ತಿರುಗಾಡುವ ಹಾಗೆ ಹರಗ್ಯಾಡಿ ತಿನ್ನುವ ಚಟ ಬಿದ್ದದ, ನಾಯಾಕೆ ಅಡುಗೆ ಮಾಡ್ಲಿ, ಎಲ್ಲಿ ಯಾದರೂ ತಿನ್ನು ಹೋಗು ಎಂದು ಒದರಾಡಲಿಕ್ಕೆ ಹತ್ತಿದ್ದಳು ಎಂದು ತಿಳಿಸಿದ ಮತ್ತು ಅದೇ ತರಹ ಹಲವಾರು ಬಾರಿ ಜಗಳ ಮಾಡಿ, ಒದರಾಡುತ್ತಾ ಬಂದಿದ್ದು, ಊರಲ್ಲಿ ನನ್ನ ಮಾನ ಮರ್ಯದೆ ತೆಗೆದಿದ್ದು, ಇವಳಿಗೆ ಹೀಗೆ ಬಿಟ್ಟರೇ, ನನಗೆ ಕಿರಿಕಿರಿ ತಪ್ಪಿದಲ್ಲ ಎಂದು ಅವಳನ್ನು ಕೊಲೆ ಮಾಡುವ ಉದ್ದೇಶದಿಂದ ಕೈಯಿಂದ ಕುತ್ತಿಗೆ ಹಿಚುಕಿ, ಕೊಲೆ ಮಾಡಿರುತ್ತೇನೆ ಎಂದು ಹೇಳಿದ ಎಂದು ಚಾಸಾ-7 ರವರು ನನಗೆ ತಿಳಿಸಿದ ಎಂದರೆ ಸರಿಯಲ್ಲ. ಈ ರೀತಿ ನಾನು ಪೋಲಿಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಹೇಳಿಕೆಯ ಈ ಭಾಗವನ್ನು ನಿ.ಪಿ.11 ಎಂದು ಗುರುತಿಸಲಾಯಿತು. ಆರೋಪಿ ನನ್ನ ಚಿಕ್ಕಪ್ಪನ ಮಗ ಆಗಿರುವ ಕಾರಣ ಆತನಿಗೆ ಸಹಾಯ

ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು:- ಶ್ರೀ. ಎಮ್.ಜಿ.ಕೆ., ವಕೀಲರಿಂದ ಆರೋಪಿ ಪರಃ</u>**

ಇಲ್ಲ ಎಂದು ನುಡಿಯುತ್ತಾರೆ.

*(ನನ್ನ ಉಕ್ತ ಲೇಖನದ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).*

ಓ.ಹೇ.ಕೇ. ಸರಿ ಅದೆ,

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪುರ.